Sri H. C. LINGA REDDY.—Will the Government state the reasons as to why the scheme of crop insurance cannot be introduced ?

The Hon'ble Sri T. MARIAPPA.—The answer is that the Government are not contemplating the introduction of the scheme. That is all. ತಾವು ಕೇಳಿರುವುದಕ್ಕೆ ಇಲ್ಲ ಎಂದು ಉತ್ತರ ಹೇಳಿದ್ದೇನೆ. ಏಕೆಂದರೆ ಈ ವಿಚಾರದಲ್ಲಿ ಸಾಕಷ್ಟು ಅನುಭವವಿಲ್ಲ, ಬೇಕಾದ ಲಿಟರೇಚರ್ ದೊರೆತಿಲ್ಲ. ಈ ಸಂದರ್ಭದಲ್ಲಿ ಇಂಡಿಯಾ ಸರ್ಕಾರದವರು ಏರ್ಪಡಿಸಿರುವ ಸಮಿತಿಯಲ್ಲಿ ಇದು ಇನ್ನೂ ಆಖೈರಾಗಿ ತೀರ್ಮಾನವಾಗಿಲ್ಲ. ಆ ದೃಷ್ಟಿಯಿಂದ ಇಂಟ್ರೊಡಕ್ಷನ್‌ಗೆ ಅವಕಾಶವಿಲ್ಲವೆಂದು ಹೇಳಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಕುಮಾರಪ್ಪನವರು ತಮ್ಮ ವರದಿಯಲ್ಲಿ ಇದರ ಆವಶ್ಯಕತೆ ಬಹಳವಾಗಿದೆಯೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ. ಇಂಡಿಯನ್ ಕಂಡೀಷನ್‌ಗೆ ಹೇಗೆ ಅವನ್ನು ಅಡಾಪ್ಟ್ ಮಾಡಿಕೊಳ್ಳಬೇಕೆಂಬುದು ಚರ್ಚೆಯಾಗುತ್ತಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಸಂಸ್ಥಾನದಲ್ಲಿ ಈಗ ಸರಿಯಾಗಿ ಮಳೆಯಿಲ್ಲದ್ದರಿಂದ ರೈತರಿಗೆ ಈ ಯೋಜನೆಯಿದ್ದಿದ್ದರೆ ಬಹಳ ಸಹಾಯವಾಗುತ್ತಿರಲಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಂಡಿಯನ್ ಕಂಡೀಷನಲ್ಲಿ ಅದರಿಂದ ಬಹಳ ರಿಸ್ಕ್ ಇದೆ. ಎಷ್ಟರಮಟ್ಟಿಗೆ ರಕ್ಷಣೆ ಕೊಡಲು ಸಾಧ್ಯ, ಒಂದೇ ಬೆಳೆಗೆ ಮೊದಲು ರಕ್ಷಣೆ ನೀಡಲು ಪ್ರಯತ್ನ ಮಾಡಬೇಕು ಎಂದು ಬೊಂಬಾಯಿನಲ್ಲಿ ಈ ಸಂಬಂಧದಲ್ಲಿ ನಡೆದ ಮಾಟಂಗಿನಲ್ಲಿ ಚರ್ಚೆಯಾಗಿದೆ. ಮೈಸೂರು ಪ್ರತಿನಿಧಿಗಳನ್ನೂ ಅಲ್ಲಿಗೆ ಕಳುಹಿಸಿದೆ. ಅಲ್ಲಿ ಫೈನಲೈಸ್ ಆಗಬೇಕಾದ್ದು ಅಗತ್ಯ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಮೈಸೂರು ಸಂಸ್ಥಾನದಲ್ಲಿ ಈ ವಿಷಯದಲ್ಲಿ ಇನ್‌ವೆಸ್ಟಿಗೇಷ ನಡೆಯುತ್ತಿದೆಯೆ ? ಇದಕ್ಕೆ ಕೂಡಲೆ ಒಂದು ಯೋಜನೆ ತಯಾರು ಮಾಡುತ್ತಾರೆಂದು ನಂಬೋಣವೆ ?

The Hon'ble Sri T. MARIAPPA.—Sir, we are quite alive to the usefulness of the scheme to us. But under what conditions and under what safeguards, it has to be introduced has got to be worked out by experts.

Sri H. C. LINGA REDDY.—I am only asking you to work out the scheme and introduce it as early as possible.

The Hon'ble Sri T. MARIAPPA.—That is exactly what the Government are trying to do. We want the Government of India to take initiative in the matter to begin with.

Construction of anicut across Yagachi River.

Q.—47. Sri B. N. BORANNA GOWDA (Hassan District—General).—Will the Government be pleased to state :—

(*a*) whether the public have requested the Government to construct an anicut across the Yagachi river near Ranaghatta in Belur Taluk ;

(*b*) the decision arrived at in this matter ;

(*c*) the number of acres that would be brought under cultivation ;

(*d*) whether they would take early steps to get the survey done to construct the anicut ?

A.—The Hon'ble Sri T. MARIAPPA (Home Minister).—

(*a*) Yes.

(*b*) The project is under investigation.

(*c*) About 680 acres.

(*d*) Yes.

ಶ್ರೀ ಬಿ. ಎನ್. ಬೋರಣ್ಣಗೌಡರು.—ಈ ಪ್ರಾಜೆಕ್ಟ್ ಇನ್‌ವೆಸ್ಟಿಗೇಷನಲ್ಲಿದೆಯೆಂದು ಉತ್ತರ ಕೊಟ್ಟಿದೆ. ಎಷ್ಟು ವರ್ಷದಿಂದ ಇನ್‌ವೆಸ್ಟಿಗೇಷ ಆಗುತ್ತಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಕೆಲವು ವರ್ಷಗಳಿಂದ ಇದೆ, ಇಷ್ಟು ಎಂದು ಖಚಿತವಾಗಿ ಹೇಳುವುದಕ್ಕೆ ನೋಟೀಸ್ ಬೇಕು. ಇದುವರೆಗೆ ಬಂದಿರುವ ಸಮಾಚಾರದ ಪ್ರಕಾರ

ಸುಮಾರು ಎರಡು ಮೂರು ವರ್ಷಗಳಿಂದ ಆಲೋಚನೆಯಲ್ಲಿದ್ದು ಈಗ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—600 ಎಕರೆ ನೀರಾವರಿಗೆ ಬರಬಹುದೆಂದು ಹೇಳಿರುವುದು ಯಾವ ಆಧಾರದ ಮೇಲೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಿಲಿಮಿನರಿ ಎಸ್ಟಿಮೇಟ್ ಆಗಿ ಅದರ ಪ್ರಕಾರ ಇಷ್ಟಾಗಬಹುದೆಂದು ಅಂದಾಜಾಗಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—600 ಎಕರೆ ಎಲ್ಲಾ ಹೊಸದೊ ಅಥವಾ ಹಳೆ ತರಿ ಜಮೀನಿಗೆ ನೀರು ಕೊಟ್ಟಿರುವುದೂ ಸೇರಿದೆಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಳೇದು ಮತ್ತು ಹೊಸದು ಎರಡೂ ಸೇರಿದೆ. ಒಂದು ರಫ್ ಸ್ಕೀಂ ಒಡ್ಡು ಬೇರೆ ಇದೆ. ಅದರಿಂದ ಛಾನಲ್ ತೆಗೆದು ನೀರಾವರಿ ಮಾಡಿಕೊಂಡಿರುವುದೂ ಇದರಲ್ಲಿ ಸೇರಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಈ ಪ್ರಾಜೆಕ್ಟಿನಿಂದ ಸಾವಿರಾರು ಕೆರೆಗಳಿಗೆ ನೀರು ಸರಬರಾಯಾಗಿ ಅದರಿಂದ ಬೇಕಾದಷ್ಟು ಬೆಳೆ ಯಾಗುತ್ತದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾವಿರಾರು ಎಂದು ಗೊತ್ತಿಲ್ಲ. ಕೆಲವು ಕೆರೆಗಳಿಗೆ ನೀರನ್ನು ಬಿಟ್ಟು ಉಪಯೋಗಿಸಬಹುದೆಂದು ಪ್ರವೀಣರು ಹೇಳಿದ್ದಾರೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಇದನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಜಾಗ್ರತೆ ಮಾಡಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜಾಗ್ರತೆ ಮಾಡುವುದಕ್ಕೆ ಇನ್‌ಸ್ಟ್ರಕ್ಷನ್ ಕೊಟ್ಟಿದೆ. ಆದಷ್ಟು ಬೇಗ ಇನ್‌ವೆಸ್ಟಿಗೇಷನ್ ಮಾಡಿ ಅಭಿಪ್ರಾಯ ವರದಿ ಕಳುಹಿಸಬೇಕೆಂದು ತಿಳಿಸಿದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಚನ್ನರಾಯಪಟ್ಟಣದಲ್ಲಿ 10-12 ವರ್ಷಗಳಿಂದ ತುಂಬದಿರುವ ಕೆರೆಗೆ ನೀರನ್ನು ಕೊಡಲು ಸಾಧ್ಯವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಬೇಗೂರಿಗೆ ಸಂಬಂಧಪಟ್ಟದೆಯೆಂದು ಕಂಡುಬರುತ್ತದೆ. ಆದ್ದರಿಂದ ಆ ಪ್ರಶ್ನೆಗೆ ಅವಕಾಶವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇನ್ಯಾವುದಾದರೂ ಅಣೆಕಟ್ಟನ್ನು ಅಲ್ಲಿ ಕಟ್ಟುವುದಕ್ಕೆ ಸಾಧ್ಯವಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಏಳುವುದಿಲ್ಲ. ಕೆರೆ ಪ್ರಾಜೆಕ್ಟು ಅವರು ಕೇಳಿರುವುದು.

Road connecting old Mysore-Bangalore Road at Boodiguppe and Kankanhalli-Kodihalli Road at Srinivasanahalli.

Q.—54. Sri S. KARIAPPA (Bangalore District—General).—

Will the Government be pleased to state :—

(*a*) whether there is a proposal to construct a road connecting old Mysore-Bangalore Road at Boodiguppe and Kankanhalli-Kodihalli Road at Srinivasanahalli in order to avoid the river Arkavathi ;

(*b*) the stage at which it stands at present ?

A.—The Hon'ble Sri T. MARIAPPA (Home Minister).—

(*a*) No such proposal in Public Works Department.

(*b*) Does not arise.

ಶ್ರೀ ಎಸ್. ಕರಿಯಪ್ಪನವರು.—ಪಬ್ಲಿಕ್ ವರ್ಕ್ಸ್ ಇಲಾಖೆಯವರು ಈ ವಿಚಾರದಲ್ಲಿ ಯಾವ ಅಂದಾಜೂ ಮಾಡಿಲ್ಲವೆಂದು ಉತ್ತರ ಕೊಟ್ಟಿದೆ. ಹಾಗಾದರೆ ಡೆವಲಪ್‌ಮೆಂಟ್ ಇಲಾಖೆಗೆ ಇದು ಸಂಬಂಧಪಟ್ಟದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಆ ವಿಚಾರದಲ್ಲಿ ಸಮಾಚಾರ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಇದನ್ನು ಡೆವಲಪ್‌ಮೆಂಟ್ ಇಲಾಖೆಯಿಂದ ಪಬ್ಲಿಕ್ ವರ್ಕ್ಸ್ ಇಲಾಖೆಗೆ ವರ್ಗಾಯಿಸುವುದಕ್ಕೆ ಸಾಧ್ಯವೆ?